# ಪ್ರಕಟಣೆ

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳ ದಾಖಲಾತಿಗೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ದಿ: 29-03-2021 ರಂದು ವೆಬ್ ಸೈಟ್ ನಲ್ಲಿ ಪ್ರಕಟಿಸಿ, ಅಭ್ಯರ್ಥಿಗಳ ದಾಖಲಾತಿಗಾಗಿ ದಿನಾಂಕ: 05-04-2021 ರವರೆಗೆ ಕಾಲಾವಕಾಶ ನೀಡಲಾಗಿತ್ತು.

ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಭ್ಯರ್ಥಿಗಳು ದಾಖಲಾದ ಬಗ್ಗೆ ವಿವರಗಳನ್ನು ಪರಿಶೀಲನಾ ಕೇಂದ್ರಗಳು ಹಾಗೂ ಬಿ.ಇಡಿ ಕಾಲೇಜುಗಳಿಂದ ಸಲ್ಲಿಕೆಯಾದ ದಾಖಲಾತಿ ವಿವರಗಳನ್ನಾಧರಿಸಿ ವಿಜ್ಞಾನ ವಿಭಾಗಕ್ಕೆ ಮಾತ್ರ ಲಭ್ಯವಿರುವ ಸೀಟುಗಳಿಗೆ [Institution wise remaining seats (category wise)] Seat Matrix ಅನ್ನು ದಿನಾಂಕ: 07-04-2021 ರಂದು ಪ್ರಕಟಿಸಿ, ಕಾಲೇಜುಗಳಿಗೆ ಆಯ್ಕೆಗಳನ್ನು (Option Entry) ದಾಖಲಿಸಲು ದಿನಾಂಕ: 09-04-2021ರ ಸಂಜೆ 5.00 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿತ್ತು.

ಈ ರೀತಿ, ವಿಜ್ಞಾನ ವಿಭಾಗದ ಅಭ್ಯರ್ಥಿಗಳು ಕಾಲೇಜುಗಳ ಆಯ್ಕೆಗಳನ್ನು ದಾಖಲಿಸಿರುವುದನ್ನು ಪರಿಗಣಿಸಿ ಮೆರಿಟ್ ಹಾಗೂ ರೋಸ್ಟರ್ ಅನ್ವಯ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 09-04-2021 ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಿದೆ. ಅಭ್ಯರ್ಥಿಗಳು ಹಂಚಿಕೆಯಾದ ಕಾಲೇಜಿಗೆ ನಿಯಮಾನುಸಾರ ನಿಗದಿತ ದಾಖಲಾತಿ ಶುಲ್ಕವನ್ನು ತಮ್ಮ Username ಮತ್ತು Password ಅನ್ನು ನಮೂದಿಸುವುದರೊಂದಿಗೆ Login ಆಗಿ ಆನ್ ಲೈನ್ ಮೂಲಕ **(ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಯು.ಪಿ.ಐ)** ಪಾವತಿಸುವುದು. ಶುಲ್ಕ ಪಾವತಿಸಿದ ನಂತರವೇ ದಾಖಲಾತಿ ಪತ್ರ Generate ಆಗುವುದರಿಂದ ಶುಲ್ಕ ಪಾವತಿಸಿ ಪರಿಶೀಲನಾ ಕೇಂದ್ರಕ್ಕೆ ತೆರಳುವುದು. ಪರಿಶೀಲನಾ ಕೇಂದ್ರದ ಮೂಲಕ ಕಾಲೇಜಿಗೆ ದಾಖಲಾಗಲು **ದಿನಾಂಕ:10-04-2021 ರಿಂದ 16-04-2021** ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಯು ದಾಖಲಾತಿ ಶುಲ್ಕ ಪಾವತಿಸಿದ ನಂತರ ತಮಗೆ ಅನ್ವಯವಾಗುವ ಮೂಲ ದಾಖಲೆಗಳನ್ನು ಅನುಬಂಧ-6ರ ನಮೂನೆಯಲ್ಲಿರುವಂತೆ ಕ್ರಮವಾಗಿ ಜೋಡಿಸಿಕೊಂಡು ಸಂಬಂಧಪಟ್ಟ ಜಿಲ್ಲಾ ನೋಡಲ್ ಕೇಂದ್ರಗಳಿಗೆ ಹಾಜರಾಗುವುದು. ನೋಡಲ್ ಕೇಂದ್ರದಲ್ಲಿ ಅಧಿಕಾರಿಗಳು ಅಭ್ಯರ್ಥಿಯು ನಿಯಮಾನುಸಾರ ಶುಲ್ಕ ಪಾವತಿಸಿರುವ ಬಗ್ಗೆ ಹಾಗೂ ಮೂಲ ದಾಖಲೆಗಳನ್ನು ಹೊಂದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ದಾಖಲಾತಿ ಪತ್ರವನ್ನು ವಿತರಿಸುವರು.

**ಸೂಚನೆ:**

1. **ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸದ ಹಾಗೂ ಪಾವತಿಸಿ ನೋಡಲ್ ಕೇಂದ್ರದ ಮೂಲಕ ಕಾಲೇಜಿಗೆ ದಾಖಲು ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಸೀಟು ರದ್ದಾಗುವುದು.**
2. **ವಿಜ್ಞಾನ ವಿಭಾಗದ ಅಭ್ಯರ್ಥಿಗಳ ದಾಖಲಾತಿಗೆ ಇದು ಕೊನೆಯ ಸುತ್ತಾಗಿರುತ್ತದೆ. ಕೊನೆಯ ದಿನಾಂಕದ ನಂತರ ದಾಖಲಾತಿಗೆ ಅವಕಾಶವಿರುವುದಿಲ್ಲ.**
3. **ಪ.ಜಾತಿ/ ಪ.ಪಂಗಡ ಕ್ಕೆ ಸೇರಿದ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಆದಾಯ ಪ್ರಮಾಣ ಪತ್ರದಲ್ಲಿ ರೂ. 2,50,000/- ರ ಒಳಗಿನ ಆದಾಯ ಮಿತಿಯನ್ನು ಹೊಂದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). ದಾಖಲಾತಿ ಪತ್ರ ಪಡೆಯುವ ಸಂದರ್ಭದಲ್ಲಿ ನೋಡಲ್ ಅಧಿಕಾರಿಗೆ ದಾಖಲಾತಿಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಈ ಪ್ರಮಾಣ ಪತ್ರವನ್ನು ಒದಗಿಸುವುದು ಕಡ್ಡಾಯ. ಒಂದು ವೇಳೆ ಆದಾಯ ಮಿತಿ ರೂ. 2,50,000/-ಗಳಿಗಿಂತ ಅಧಿಕವಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ.**

ಸಹಿ/-

ವಿಶೇಷಾಧಿಕಾರಿ

ಕೇಂದ್ರೀಕೃತ ದಾಖಲಾತಿ ಘಟಕ